

# ಹದ್ದು ವಿಸ್ಮಯದ ಪಕ್ಷಿ

ಬಲಿಷ್ಠ ಮೈಕಟ್ಟು, ಚುರುಕು ಕಣ್ಣುಗಳ, ತೀಕ್ಷ್ಣ ಗುರಿಯ ಹದ್ದನ್ನು ಪ್ರಾಚೀನ ಕಾಲದಿಂದಲೂ ಶಕ್ತಿಯ ದ್ಯೋತಕವಾಗಿ ಪ್ರತಿನಿಧಿಸಲಾಗುತ್ತದೆ. ಇದರ ಹೊರತಾಗಿ, ಜೈವಿಕ ಸರಪಳಿಯ ಪ್ರಮುಖ ಕೊಂಡಿಯಾಗಿರುವ ಈ ಜೀವದ ಬಗ್ಗೆ ಹತ್ತು ಹಲವು ಅಚ್ಚರಿಯ ಸಂಗತಿಗಳೂ ಇವೆ.

■ ಡಾ. ಎನ್‌.ಬಿ. ಶ್ರೀಧರ

ಹದ್ದುಗಳ ಪ್ರಭೇದಗಳು ಸುಮಾರು **60**

ಪ್ರಪಂಚದಲ್ಲಿ ಇವುಗಳ ಸಂಖ್ಯೆ **6.5–7.0** ಲಕ್ಷ

ಹದ್ದುಗಳು, ಬೇಟೆಯ ಪಕ್ಷಿಗಳ ಆಕ್ಸಿಪಿಟ್ರಿಡೆ ಕುಟುಂಬಕ್ಕೆ ಸೇರಿದ್ದು, ಲಕ್ಷಾಂತರ ವರ್ಷಗಳಿಂದ ಭೂಮಿಯ ಮೇಲಿವೆ. ಜೊತೆಗೆ ಸುದೀರ್ಘ ವಿಕಸನದ ಇತಿಹಾಸ ಹೊಂದಿವೆ. ಶಕ್ತಿಯುತ ಮೈಕಟ್ಟು, ದೊಡ್ಡ ಕೊಕ್ಕು ಮತ್ತು ಬಲವಾದ ಹಿಡಿತದ ಉಗುರುಗಳನ್ನು ಹೊಂದಿವೆ. ಪ್ರಾಚೀನ ಕಾಲದಿಂದಲೂ ಶಕ್ತಿ ಮತ್ತು ಯುದ್ಧದ ಸಂಕೇತಗಳಾಗಿದ್ದು, ಬ್ಯಾಬಿಲೋನಿಯನ್, ಗ್ರೀಕ್ ಮತ್ತು ರೋಮನ್ ಸಂಸ್ಕೃತಿಗಳಲ್ಲಿ ಇವುಗಳ ಚಿತ್ರ ಕಾಣಿಸಿಕೊಂಡಿದೆ.

ಹದ್ದುಗಳ ವಿಧಗಳಲ್ಲಿ ಬೋಳು ಹದ್ದು (ಹ್ಯಾಲಿಯಾಯೆಟಸ್ ಲ್ಯುಕೋಸೆಫಾಲಸ್), ಬಂಗಾರದ ಹದ್ದು (ಅಕ್ವಿಲಾ ಕ್ರಿಸೇಟೋಸ್), ಫಿಲಿಪ್ಪೀನ್ಸ್ ಹದ್ದು (ಪಿಥೆಕೋಫಾಗ ಜೆಫೆರಿ) ಮತ್ತು ಹಾರ್ಪಿ ಹದ್ದು (ಹಾರ್ಪಿಯಾ ಹಾರ್ಪಿಜಾ) ಪ್ರಮುಖವಾಗಿವೆ.

ಹದ್ದುಗಳ ಆಯುಸ್ಸು ಸರಾಸರಿ **20—30** ವರ್ಷ. ಪ್ರಾಣಿ ಸಂಗ್ರಹಾಲಯದಲ್ಲಿ ನೈಸರ್ಗಿಕ ಅಪಾಯವಿಲ್ಲದ ವಾತಾವರಣದಲ್ಲಿ ಹದ್ದುಗಳ ಜೀವಿತಾವಧಿ ದಾಖಲೆ **50** ವರ್ಷ

## ಹದ್ದು ಮತ್ತು ರಣಹದ್ದು: ಏನು ವ್ಯತ್ಯಾಸ?

ಹದ್ದು, ರಣಹದ್ದು, ಗಿಡುಗ ಅಥವಾ ಗರುಡ ಇವು ನೋಡಲು ಒಂದೇ ತರಹ ಕಾಣಿಸಿದರೂ ಅವುಗಳಲ್ಲಿ ಭಿನ್ನತೆ ಇದೆ. ಹದ್ದುಗಳ ತೂಕ (2.5 ರಿಂದ 7 ಕಿಲೊ) ರಣಹದ್ದುಗಳಿಗೆ ಹೋಲಿಸಿದರೆ (1–6 ಕಿಲೊ) ಜಾಸ್ತಿ. ಹದ್ದು ಮತ್ತು ರಣಹದ್ದು ಸಂಪೂರ್ಣ ಬೇರೆ ವರ್ಗ. ಹದ್ದುಗಳು ಮೀನು, ಹಕ್ಕಿ ಮತ್ತು ಮೊಲದಂತಹ ಸಣ್ಣ ಸ್ತನಿ ಪ್ರಾಣಿಗಳನ್ನು ಬೇಟೆಯಾಡಿ ಭಕ್ಷಿಸಿದರೆ, ರಣಹದ್ದುಗಳು ಶವಭಕ್ಷಕಗಳು. ಹದ್ದುಗಳು ಜೊತೆಯಾಗಿ ಬದುಕಿದರೂ ಸ್ವತಂತ್ರ ಜೀವಿಗಳಾದರೆ, ರಣಹದ್ದುಗಳು ಸಾಮಾಜಿಕ ಜೀವಿಗಳು. ಹದ್ದುಗಳು ರಣಹದ್ದುಗಳಿಗೆ ಹೋಲಿಸಿದರೆ ಹೆಚ್ಚು ಆಕ್ರಮಣಕಾರಿಗಳು. ಹದ್ದುಗಳು ಜಾಸ್ತಿ ರೆಕ್ಕೆ ಪುಕ್ಕ ಹೊಂದಿದ್ದರೆ, ರಣಹದ್ದುಗಳು ಬೋಳು ಕುತ್ತಿಗೆಯವು. ಹದ್ದುಗಳು ಏಕಾಂಗಿಯಾಗಿ ಹಾರುವ ಜೀವಿಗಳಾದರೆ, ರಣಹದ್ದುಗಳು ಸಮೂಹದಲ್ಲಿಯೇ ಹಾರುತ್ತವೆ.





ಹದ್ದುಗಳು ತಮ್ಮದೇ ಗಡಿಯನ್ನು ಗುರುತಿಸಿಕೊಂಡ ನಂತರ ಸೂಕ್ತ ಸಂಗಾತಿಗಾಗಿ ಹುಡುಕುತ್ತಾ, ದೊರಕಿದ ನಂತರ ಗೆಳೆತನ ಬೆಳೆಸಿ ಪೂರ್ಣ ನಂಬಿಕೆಯೊಂದಿಗೆ ಮಾತ್ರ ಲೈಂಗಿಕಕ್ರಿಯೆ ನಡೆಸುತ್ತವೆ. ಇವು ಕುಟುಂಬ ಯೋಜನೆಯನ್ನು ಸಹ ಅನುಸರಿಸುತ್ತವೆ. ಆಹಾರದ ಕೊರತೆ ಕಾಲದಲ್ಲಿ ತೀವ್ರ ಚಳಿಯಿದ್ದಾಗ, ತೀವ್ರ ಬಿಸಿಲಿದ್ದಾಗ ಅಥವಾ ಬರಗಾಲದ ಸೂಚನೆಯಿದ್ದರೆ ತತ್ತಿ ಹಾಕುವುದಿಲ್ಲ. ಮತ್ತೊಂದು ಕುತೂಹಲಕಾರಿ ವಿಷಯವೆಂದರೆ ಈ ಸಮಯವನ್ನು ತಮ್ಮ ಗೂಡನ್ನು ಹಸುರು ಹುಲ್ಲು, ಮಿಣುಕು ಹುಳಗಳು, ವಿವಿಧ ರೀತಿಯ ಕೀಟಗಳ ರೆಕ್ಕೆಗಳು ಇತ್ಯಾದಿಗಳಿಂದ ಅಲಂಕರಿಸುತ್ತಾ ಆನಂದಿಸುತ್ತವೆ.